**ಸಾಕ್ಷಿಗೆ ದಿನಾಂಕ 07-02-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ VCMP ವಕೀಲರಿಂದ</u>**

ನಾನು ಬೆಂಗಳೂರಿನ ಆರ್.ಟಿ.ನಗಟದ ಸೇಂಟ್ ಮೈಕಲ್ಸ್ ಖಾಸಗಿ ಹೈಸ್ಕೂಲ್ ಶಾಲೆಯಲ್ಲಿ ದೈಹಿಕ ಶಿಕ್ಷಕನಾಗಿದ್ದೆ. ನಾನು ಈಗ ದೈಹಿಕ ಶಿಕ್ಷಕನಾಗಿ ಕೆಲಸ ಮಾಡುತ್ತಿಲ್ಲ. ನಾನು ಈಗ ದೈಹಿಕ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

ನನಗೆ ಸದರಿ ಶಾಲೆಯವರು ಪ್ರತಿ ತಿಂಗಳು 14 ಸಾವಿರ ಸಂಬಳ ನೀಡುತ್ತಿದ್ದರು. ನನಗೆ ಸದರಿ ಶಾಲೆಯವರು ಪ್ರತಿ ತಿಂಗಳು 14 ಸಾವಿರ ಸಂಬಳ ನೀಡುತ್ತಿದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಆದರೆ ಸದರಿ ಶಾಲೆಯವರು ಸಂಬಳದ ಹಣವನ್ನು ನಗದು ರೂಪದಲ್ಲಿ ನೀಡುತ್ತಿದ್ದರು. ನಾನು ಸದರಿ ಶಾಲೆಯಲ್ಲಿ ದೈಹಿಕ ಶಿಕ್ಷಕನಾಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಶಾಲೆಯವರು ಪ್ರತಿ ತಿಂಗಳು 14 ಸಾವಿರ ಸಂಬಳ ನೀಡುತ್ತಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ 36 ವರ್ಷ ವಯಸ್ಸಾಗಿತ್ತು.

ನನ್ನ ವಯಸ್ಸನ್ನು ತೋರಿಸಲು ಆಧಾರ್ ಕಾರ್ಡ್ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಅಪಘಾತದ ಸಮಯದಲ್ಲಿ ನನಗೆ 45 ವರ್ಷಕ್ಕಿಂತ ಹೆಚಿಗೆ ವಯಸ್ಸಾಗಿದ್ದರೂ ಸಹ 36 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ದಿನದಂದು ನಾನು ಜೇವರ್ಗಿಯಿಂದ ಕಲ್ಬುರ್ಗಿಗೆ ದ್ವಿ-ಚಕ್ರ ವಾಹನದ ಮೇಲೆ ನಾನೊಬ್ಬನೇ ಹೋಗುತ್ತಿದ್ದೆ. ದ್ವಿ-ಚಕ್ರ ವಾಹನ ಚಾಲನೆ ಮಾಡಲು ನಾನು ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿರುತ್ತೇನೆ. ಸದರಿ ವಾಹನ ಚಾಲನಾ ಪರವಾನಿಗೆ ಪತ್ರ ಕಳೆದುಹೋಗಿರುತ್ತದೆ. ಅಪಘಾತದ ಸಮಯದಲ್ಲಿ ನನ್ನ ವಾಹನ ಚಾಲನಾ ಪರವಾನಿಗೆ ಪತ್ರ, ಆಧಾರ್ ಕಾರ್ಡ್ ಹಾಗೂ ಹಣ ಕಳೆದುಹೋಗಿರುತ್ತದೆ. ನಾನು ಆಧಾರ್ ಕಾರ್ಡ್ ಮತ್ತೊಂದು ಪಡೆದುಕೊಂಡಿರುತ್ತೇನೆ. ದೂರಿನಲ್ಲಿ ನನ್ನ ಆಧಾರ್ ಕಾರ್ಡ್ ಹಾಗೂ ವಾಹನ ಚಾಲನಾ ಪರವಾನಿಗೆ ಪತ್ರ ಕಳೆದುಹೋಗಿರುತ್ತದೆಂದು ಬರೆಸಿಲ್ಲ ಎಂದರೆ ನಿಜ. ಅಪಘಾತದ ಸಮಯದಲ್ಲಿ ನಾನು ವಾಹನ ಚಾಲನಾ ಪರವಾನಿಗೆ ಪತ್ರ ಪಡೆಯದೇ ಹಾಗೂ ಹೆಲ್ಮೇಟನ್ನು ಧರಿಸದೇ ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ನಾನು ಕಲ್ಬುರ್ಗಿಗೆ ಹೋಗುವಾಗ ಜೇವರ್ಗಿಯ ಬಸ್ ಡಿಪೊ ಮುಂದೆ ಅಪಘಾತ ಆಗಿರುತ್ತದೆ. ಆಟೋ ವಾಹನದವನು ನನ್ನ ಕಡೆಗೆ ಬಂದು ಅಪಘಾತಪಡಿಸಿದ ಕಾರಣ ಅಪಘಾತ ಆಗಿರುತ್ತದೆ. ಆಟೋ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ವಾಹನ ಚಾಲನೆ ಮಾಡಲು ಸರಿಯಾಗಿ ಬರದ ಕಾರಣ ಹಾಗೂ ನಾನು  ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿರದ ಕಾರಣ ನಾನೇ ದ್ವಿ-ಚಕ್ರ ವಾಹನವನ್ನು ಸರಿಯಾಗಿ ಚಾಲನೆ ಮಾಡದೇ ನಾನೇ ಸದರಿ ದ್ವಿ-ಚಕ್ರ ವಾಹನದ ಮೇಲಿನಿಂದ ಬಿದ್ದು ಅಪಘಾತ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಆ ದಿನ ಆಟೋ ಅಪಘಾತ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಕುರಾಳ ಆಸ್ಪತ್ರೆಗೆ ಹೋಗಿದ್ದೆ. ಸದರಿ ಕುರಾಳ ಆಸ್ಪತ್ರೆಯಲ್ಲಿ ನಾನು ಎಷ್ಟು ದಿನ ದಾಖಲಾಗಿದ್ದೆ ಎಂದರೆ 8-9 ದಿನ ದಾಖಲಾಗಿದ್ದೆ.

ಪೊಲೀಸರು ದೂರನ್ನು ನಾನು ಆಸ್ಪತ್ರೆಯಲ್ಲಿ ದಾಖಲಿದ್ದಾಗ ಬರೆದುಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು 13-10-2020 ರಂದು ಬರೆದುಕೊಂಡಿರುತ್ತಾರೆ. ಪುಂಡಲೀಕ ಎನ್ನುವವರು ನನ್ನ ಮಾವ ಅವರೇ ದೂರು ನೀಡಿರುತ್ತಾರೆಂದರೆ ನಿಜ. ಸದರಿ ಪುಂಡಲೀಕ ಅಪಘಾತದ ಸ್ಥಳದಲ್ಲಿರಲಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮ ಮಾವ ಪುಂಡಲೀಕರವರ ಸ್ನೇಹಿತನಾದ ದೇವಿಂದ್ರಪ್ಪರವರು ಫೋನ್ ಮೂಲಕ ಅಪಘಾತದ ವಿಚಾರ ತಿಳಿಸಿರುತ್ತಾರೆ. ಅಪಘಾತವಾದಾಗ ನನಗೆ ಪ್ರಜ್ಞೆ ಇರಲಿಲ್ಲ. ಅಪಘಾತದ ಸಮಯದಲ್ಲಿ ನನ್ನೊಂದಿಗೆ ಯಾರೂ ಇರಲಿಲ್ಲ.

ಅಪಘಾತವು ದಿನಾಂಕ 06-10-2020ರಂದು ಆಗಿದ್ದು ದೂರನ್ನು 13-10-2020 ರಂದು 7 ದಿನಗಳ ನಂತರ ದೂರು ನೀಡಿರುತ್ತೇವೆಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಾಯಿ ವ್ಯವಹಾರ ಜ್ಞಾನ ಇಲ್ಲ ಹಾಗೂ ನನ್ನ ಮಾವ ನನ್ನ ಚಿಕಿತ್ಸೆಗಾಗಿ ವ್ಯಸ್ತನಾಗಿದ್ದ ಕಾರಣ ದೂರು ನೀಡಲು ತಡವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 FIR ನಲ್ಲಿ ಕಾಲಂ ನಂ.3 ಸಿ ರಲ್ಲಿ ವಿಳಂಬಕ್ಕೆ ಕಾರಣ ಉಪಚಾರ ಪಡೆದುಕೊಂಡು ಮನೆಯಲ್ಲಿ ವಿಚಾರ ಮಾಡಿ ದೂರು ನೀಡಿದ್ದು ಅದೆ ಎಂದು ನಮೂದು ಆಗಿದೆ ಎಂದರೆ ನಿಜ.

ಆಸ್ಪತ್ರೆಯವರಿಗೆ ಅಪಘಾತ ಹೇಗೆ ಆಗಿದೆ ಎಂದು ಹೇಳಿದ್ದೀರಾ ಎಂದರೆಸ ಾಕ್ಷಿ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾನೇ ದ್ವಿ-ಚಕ್ರ ವಾಹನದಿಂದ ಬಿದ್ದು ಗಾಯಮಾಡಿಕೊಂಡಿದ್ದು ಅದಕ್ಕೆ ಪರಿಹಾರ ಧನ ಸಿಗಲ್ಲ ಅಂತಾ ಭಾವಿಸಿ ನಾವು, ಆಟೋ ವಾಹನದ ಮಾಲೀಕ ಹಾಗೂ ಪೊಲೀಸರು ಕೂಡಿಕೊಂಡು ಸದರಿ ಆಟೋವನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಆಟೋವಾಹನದಿಂದ ಯಾವುದೇ ಅಪಘಾತ ಆಗಿರದೇ ಇದ್ದರೂ ಸಹ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಕಾಲಿಗೆ, ಕಣ್ಣಿಗೆ, ಮೂಗಿಗೆ, ಕಿವಿಗೆ ಗಾಯವಾಗಿದೆ. ಸಾಕ್ಷಿ ಮುಂದುವರೆದು ನನಗೆ ಒಂದು ಕಣ್ಣಿನ ದೃಷ್ಟಿ ಮಂಜಾಗಿ ಕಾಣುತ್ತದೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ನಾನು 9 ದಿನಗಳವರೆಗೆ ಇದ್ದೆ. ನನ್ನ ಆಸ್ಪತ್ರೆಯ ಖರ್ಚು ಎಷ್ಟಾಗಿದೆ ಎಂದು ಗೊತ್ತಿಲ್ಲ ಆದರೆ ನಮ್ಮ ಮಾವನಿಗೆ ಗೊತ್ತು. ನಿಪಿ-10 ಮತ್ತು 11ರ ಕ್ಯಾಶ್ ಮೆಮೊ ದಾಖಲಾತಿಗಳಾಗಿದ್ದು ಅವು ಆಸ್ಪತ್ರೆಯ ಬಿಲ್ಲುಗಳಲ್ಲ ಹಾಗೂ ಅವುಗಳನ್ನು ನಮಗೆ ಬೇಕಾದ ಹಾಗೆ ಬರೆಯಿಸಿಕೊಂಡು ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ. ನಿಪಿ-10 ಮತ್ತು 11 ರ ದಾಖಲಾತಿಗಳಿಗೆ in patient ನಂಬರ್ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ರ ದಾಖಲಾತಿಗಳನ್ನು ಸೃಷ್ಟಸಿಕೊಂಡು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ನನಗೆ ಆದಂತಹ ಗಾಯಗಳು ವಾಸಿಯಾಗಿದ್ದು ನಾನು ಮೊದಲಿನ ಹಾಗೆ ಕೆಲಸ ಮಾಡಬಲ್ಲೆ ಹಾಗೂ ನಾನು ಮೊದಲಿನ ಹಾಗೆ ಕೆಲಸ ಮಾಡಬಲ್ಲ ಎಂದೆರ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇರದೇ ಇದ್ದರೂ ಸಹ ನಿಪಿ-19 ರ ಅಂಗನ್ಯೂನ್ಯತಾ ಪ್ರಮಾಣಪ ತ್ರವನ್ನು ಪ್ರಕರಣಕ್ಕೆ ಅನುಕೂಲವಾಗಲೆಂದು ವೈದ್ಯರಿಂದ ಬರೆಯಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿದ ಬಿಲ್ಲುಗಳು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಸಿಕೊಂಡು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾವು ಕೇಳಿದ ಪರಿಹಾರ ಧನದ ಮೊತ್ತಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಕೇಳಿರುತ್ತೇವೆಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ